MYSORE LEGISLATIVE ASSEMBLY

FORTY-FIFTH DAY

Monday, 3rd August 1953

The House met in the Assembly Hall, Old Public Offices, Bangalore, at Twelve of the Clock.

MR. SPEAKER (Sri H. SIDDAIYA, B.A., LL.B.) in the Chair.

QUESTIONS AND ANSWERS

Mr. SPEAKER.—Questions Nos. 246 and 247 are of a similar nature and so, they may be taken up together.

Forming a road from Kunthoordoddi to Rampura in Channapatna Taluk.

Q.—246. Sri V. VENKATAPPA (Channapatna).—

Will the Government be pleased to state :—

(*a*) when some lands were acquired to form a road from Kunthoordoddi (ಕುಂತೂರು ದೊಡ್ಡಿ) to Ramapura in Kasaba Hobli, Channapatna Taluk ;

(*b*) whether it is true that acquisition proceedings were completed and the lands were given to the possession of the Chairman of the Village Panchayet, Tittamaranahalli, Channapatna Taluk ;

(*c*) whether it is true that subsequent to the possession being given, one of the landholders namely Sri Sidde Gowda, son of Siddiah of Chikkanadoddi gave an application to the Minister concerned and a stay order has been given ; if so, when ?

A.—Sri T. CHANNIAH (Minister for Public Health and Local Self-Government).—

(*a*) The Government Order was passed on 22nd June 1949.

(*b*) Yes.

(*c*) Yes. On 18th August 1952.

Q.—247. Sri V. VENKATAPPA (Channapatna).—

Will the Government be pleased to state :—

(*a*) when the order was passed to take up the road between Kunthoordoddi and Ramapura in Kasaba Hobli, Channapatna Taluk ;

(*b*) when the estimate was prepared and what was the estimated amount ;

(*c*) whether the estimate has been revised ; if so, for how much ;

(*d*) whether the work has been taken up ; if not, the reasons for the same ?

A.—Sri T. CHANNIAH (Minister for Public Health and Local Self-Government).—

(*a*) The proposal was taken up by Rural Welfare Centre in 1946.

(*b*) October 1946. Rs. 2,500.

(*c*) Yes. Rs. 6,500.

(*d*) The bridge has been completed. In the meantime, a Stay Order was issued by Government on 18th August 1952 in regard to the acquisition of land through which the road is to be formed. Further work on the road has been stopped.

ಶ್ರೀ ವಿ. ವೆಂಕಟಪ್ಪ.—(ಡಿ) ಪ್ರಶ್ನೆಗೆ ಉತ್ತರವಾಗಿ ತಡೆ ಆಜ್ಞೆ ಮಾಡಲಾಗಿದೆಯೆಂದು ಹೇಳಿದ್ದೀರಿ. ತಾವು ಏನು ತಡೆ ಆಜ್ಞೆ ಮಾಡಿದ್ದೀರಿ ?

ಶ್ರೀ ಟಿ. ಚನ್ನಯ್ಯ.—ಆ ರೋಡ್ ಫಾರ್ಮೇಷನ್ನಿನ ಕೆಲಸಕ್ಕೆ ತಡೆ ಮಾಡಿರುತ್ತೇವೆ.

ಶ್ರೀ ವಿ. ವೆಂಕಟಪ್ಪ.—ಹಾಗಾದರೆ ಆ ರಸ್ತೆಯನ್ನು ಮಾಡಕೂಡದೆಂದು ತಡೆ ಮಾಡಿದ್ದೀರಾ ?

ಶ್ರೀ ಟಿ. ಚೆನ್ನಯ್ಯ.—ಹೌದು.

ಶ್ರೀ ವಿ. ವೆಂಕಟಪ್ಪ —ಹಾಗಾದರೆ ಜಮೀನಿನ ವಿಚಾರದಲ್ಲಿ ಏನೂ ತಡೆ ಆಜ್ಞೆ ಮಾಡಿರುವುದಿಲ್ಲವಲ್ಲವೇ?

ಶ್ರೀ ಟಿ. ಚೆನ್ನಯ್ಯ.—ಆ ಜಮೀನಿನ ಮೇಲೆ ರಸ್ತೆ ಹೋಗುವುದರಿಂದ ಅದು ಉದ್ಭವವಾಗಿದೆ.

ಶ್ರೀ ವಿ. ವೆಂಕಟಪ್ಪ.—(ಡಿ) ಪ್ರಶ್ನೆಗೆ ಹೌದು ಎಂದು ಉತ್ತರ ಹೇಳಿದ್ದೀರಿ. ಜಮೀನ್ದಾರನು ತಡೆಗೆ ಅರ್ಜಿ ಹಾಕುವುದಕ್ಕೂ ಮತ್ತು ಕೆಲಸ ನಿಲ್ಲಿಸುವುದಕ್ಕೂ ಏನು ಸಂಬಂಧ?

ಶ್ರೀ ಟಿ. ಚನ್ನಯ್ಯ.—ಜಮೀನ್ದಾರರು ತಡೆ ಅರ್ಜಿ ಹಾಕಿದ್ದರಿಂದ ಕೆಲಸ ನಿಲ್ಲಿಸಲು ಕಾರಣವಾಯಿತು. ಆ ಸಂಬಂಧವಾದ ರೆಕಾರ್ಡುಗಳು ನಮಗೆ ಇನ್ನೂ ಜಿಲ್ಲಾಧಿಕಾರಿಗಳಿಂದ ಬಂದಿಲ್ಲ. ಅದನ್ನು ತರಿಸಿ ತಿಾವೇ ಜಾಗ್ರತೆಯಾಗಿ ಇದನ್ನು ತೀರ್ಮಾನ ಮಾಡಬೇಕೆಂದಿದ್ದೇವೆ. ಇದನ್ನು ಬೇಗ ತೀರ್ಮಾನ ಮಾಡಲಾಗುತ್ತೆ. ಹಾಗೆ ಪಾರ್ಟಿ ತನಗೆ ತೊಂದರೆ ಇದೆಯೆಂದು ಹೇಳಿದ್ದರಿಂದ ಅದನ್ನು ನೋಡಿ ಅನಂತರ ಮುಂದಿನ ಹುಕುಮನ್ನು ಮಾಡಬೇಕಾಗಿ ಬಂದಿದೆ.

ಶ್ರೀ ವಿ. ವೆಂಕಟಪ್ಪ.—ಹಾಗಾದರೆ ಜಿಲ್ಲಾಧಿಕಾರಿಗಳ ಆಫೀಸಿನಿಂದ ತಮಗೆ ರಿಕಾರ್ಡುಗಳು ಬರಬೇಕಾದರೆ ಒಂದು ವರ್ಷಕಾಲದ ಮೇಲೆ ಬೇಕಾಗುತ್ತದೆಯೇ?

ಶ್ರೀ ಟಿ. ಚನ್ನಯ್ಯ.—ರಿಮೈಂಡರ್ಸ್‌ನ್ನು ಕೊಟ್ಟಿದ್ದೇವೆ. ಜಾಗ್ರತೆ ತರಿಸಿ ಅದನ್ನು ಫೈನಲ್ ಮಾಡುತ್ತೇವೆ.

ಶ್ರೀ ವಿ. ವೆಂಕಟಪ್ಪ.—ತಾವೀಗ ಅಕ್ವಯರ್ ಮಾಡಿಕೊಂಡಿರುವ ಜಮೀನು ಎಷ್ಟು?

ಶ್ರೀ ಟಿ. ಚನ್ನಯ್ಯ.—31 ಗುಂಟೆಗಳು.

ಶ್ರೀ ವಿ. ವೆಂಕಟಪ್ಪ.—ತಕರಾರುದಾರನ ಜಮೀನೆಷ್ಟು?

ಶ್ರೀ ಟಿ. ಚನ್ನಯ್ಯ —6 ಗುಂಟೆಗಳು.

ಶ್ರೀ ವಿ. ವೆಂಕಟಪ್ಪ.—ಹಾಗೆ ಕೇವಲ ಆರು ಗುಂಟೆ ವಿಷಯದಲ್ಲಿ ಜಮೀನ್ದಾರನೊಬ್ಬನ ತಕರಾರಿಗೋಸ್ಕರ ವಾಗಿ ಇಡೀ ಕೆಲಸವನ್ನೇ ತಡೆಯುವುದಕ್ಕೆ ಸಾಧ್ಯವಾಗಿದೆ ಏನು?

ಶ್ರೀ ಟಿ. ಚನ್ನಯ್ಯ.—ಜಿಲ್ಲಾಧಿಕಾರಿಗಳಿಂದ ರೆಕಾರ್ಡುಗಳು ಬಂದಿಲ್ಲ. ಬಂದ ತಕ್ಷಣವೇ ಜಾಗ್ರತೆ ಆ ಕೆಲಸವನ್ನು ಪರಿಶೀಲನೆ ನಡೆಸಿ ಪೂರೈಸಲಾಗುತ್ತದೆ.

ಶ್ರೀ ವಿ. ವೆಂಕಟಪ್ಪ.—ತಾವು ಈ ಜಮೀನುಗಳನ್ನೆಲ್ಲಾ ಪಂಚಾಯಿತಿಯವರ ವಶಕ್ಕೆ ಒಪ್ಪಿಸಲಾಗಿದೆಯೆಂದು ತಿಳಿಸಿದ್ದೀರಿ. ಹಾಗೆ ಒಪ್ಪಿಸಿದ ನಂತರವೂ ಈ ರೀತಿ ತಡೆ ಆಜ್ಞೆ ಕೊಡಲು ಸಾಧ್ಯವಿದೆಯೇ? ಹಾಗೆ ತಾವು ಯಾವಾಗ ಕೊಟ್ಟ ನಂತರ ತಡೆ ಮಾಡಿದ್ದು?

ಶ್ರೀ ಟಿ. ಚನ್ನಯ್ಯ.—1952ರ ಆಗಸ್ಟಿನಲ್ಲಿ ನಬ್ ಓವರ್‌ಸೀಯರ್ ಬಂದು ಆ ಜಮೀನನ್ನು ಅವರ ವಶಕ್ಕೆ ತೆಗೆದುಕೊಂಡರು. ಈ ವಿಚಾರದಲ್ಲಿ ಒಂದು ತಕರಾರು ಯಾವಾಗ ನಮಗೆ ಒಂದು ಪಾರ್ಟಿಯಿಂದ ಬಂದಿತೋ ಆಗ ನಾವು ಅಲ್ಲಿನ ಕೆಲಸವನ್ನು stay ಮಾಡಿಸಬೇಕಾಯಿತು. ಈಗ ಅದನ್ನು ಕೂಡಲೇ ಪರಿಶೀಲನೆ ಮಾಡಿ, ರಿಕಾರ್ಡು ಬಂದನಂತರ ಜಾಗ್ರತೆ ಫೈನಲ್ ಮಾಡುತ್ತೇವೆ.

ಶ್ರೀ ವಿ. ವೆಂಕಟಪ್ಪ.—ಹಾಗೆ ಪಂಚಾಯಿತಿಯ ಸುಪರ್ದಿಗೆ ಕೊಟ್ಟ ಮೇಲೆ ತಡೆ ಮಾಡಲು ಅವಕಾಶ ಎಲ್ಲವೆಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಚೆನ್ನಯ್ಯ.—ಅಂಶಹ ನಿರ್ಬಂಧವೇನೂ ಇಲ್ಲ. ಹಾಗೆ ಪುನಃ ಪರಿಶೀಲನೆ ಮಾಡಿ ತೀರ್ಮಾನ ಮಾಡಬಾರದೆಂದು ಎಲ್ಲಿಯೂ ನಮೂದಿಸಿಲ್ಲ.

ಶ್ರೀ ವಿ. ವೆಂಕಟಪ್ಪ.—ಲ್ಯಾಂಡ್ ರೆವೆನ್ಯೂ ಕೋಡಿನ ರೂಲ್ಸು ಪ್ರಕಾರ ಹಾಗೆ ಕೊಟ್ಟನಂತರ ಪುನಃ stay ಮಾಡುವುದಕ್ಕಾಗುವುದಿಲ್ಲ, ಅದಕ್ಕೆ ತೊಂದರೆ ಇದೆ ಯೆಂಬ ಅಂಶ ತಮ್ಮ ಗಮನಕ್ಕೆ ಬಂದಿಲ್ಲವೇ?

ಶ್ರೀ ಟಿ. ಚನ್ನಯ್ಯ.—ಯಾರಾದರೂ ಪಾರ್ಟಿಗಳು ಬಂದು ತಮಗೆ ಆ ಕೆಲಸದಿಂದ ತೊಂದರೆ ಯಾಗುತ್ತದೆಂದು ಅದರಲ್ಲಿ ಅವರಿಗೆ ಇರುವಂಥ ರಿಯಲ್ ಗ್ರೀವೆನ್ಸ್‌ನ್ನು ಹೇಳಿಕೊಂಡರೆ ಅದನ್ನು ಎಗ್ಜಾಮಿನ್ ಮಾಡುವುದು ನಮ್ಮ ಕರ್ತವ್ಯ.

ಶ್ರೀ ವಿ. ವೆಂಕಟಪ್ಪ.—ಇದನ್ನು ಫೈನಲುಮಾಡುವುದಕ್ಕೆ ತಮಗೆ ಇನ್ನೂ ಎಷ್ಟು ವರ್ಷಗಳು ಬೇಕಾಗುತ್ತವೆ?

ಶ್ರೀ ಟಿ. ಚನ್ನಯ್ಯ.—As early as possible. ರೆಕಾರ್ಡು ಬಂದ ಮೇಲೆ, ಜಾಗ್ರತೆ ಮಾಡಿಸುತ್ತೇವೆ.

ಶ್ರೀ ವಿ. ವೆಂಕಟಪ್ಪ.—ಸೇತುವೆ ಕಟ್ಟಿ ಆಗಿದೆಯೆಂದು ಹೇಳಿದ್ದೀರಿ. ಯಾವಾಗ ತಾವು ಆ ಸೇತುವೆಯನ್ನು ಕಟ್ಟಿಸಿದ್ದು?

ಅಧ್ಯಕ್ಷರು.—'The bridge has been completed' ಎಂದು ಹೇಳಲಾಗಿದೆ.

ಶ್ರೀ ಟಿ. ಚನ್ನಯ್ಯ.—ಅದು ಕಂಪ್ಲೀಟ್ ಆಗಿದೆಯೆಂಬುದಾಗಿ ನಮಗೆ ವರದಿ ಬಂದಿದೆ.

ಶ್ರೀ ವಿ. ವೆಂಕಟಪ್ಪ.—ಇನ್ನೂ ರಸ್ತೆಯ ಕೆಲಸವೇ ಪ್ರಾರಂಭವಾಗಲು ಮಂಜೂರಾತಿ ಇಲ್ಲವೆಂದು ಹೇಳಿದ್ದೀರಿ. ಹಾಗಿರುವಾಗ ಸೇತುವೆ ಕೆಲಸ ಹೇಗೆ ಮುಗಿಯಿತು?

ಶ್ರೀ ಟಿ. ಚನ್ನಯ್ಯ.—ಕೆಲಸ ಮಂಜೂರಾಗಿದೆ.

ಶ್ರೀ ವಿ. ವೆಂಕಟಪ್ಪ.—ಮೊದಲು 2,500 ರೂಪಾಯಿಗಳಿಗೆ ಅಂದಾಜಾಗಿದ್ದು ಅನಂತರ 6,500 ರೂಪಾಯಿಗಳಿಗೆ ಅಂದಾಜು ತಿದ್ದುಪಾಟಾಗಿದೆಯೆಂದು ಹೇಳಿದ್ದೀರಿ. ಈ 6,500 ರೂಪಾಯಿಗಳ ಅಂದಾಜು ಮಂಜೂರಾಗಿಲ್ಲವೆಂದು ಹೇಳಿದ್ದೀರಲ್ಲಾ? ಹಾಗಿರುವಾಗ ಸೇತುವೆ ಕಟ್ಟಿದ್ದು ಯಾವಾಗ?

ಶ್ರೀ ಟಿ. ಚನ್ನಯ್ಯ.—ರಿವೈಸ್ಡ್ ಎಸ್ಟಿಮೇಟ್ ಇನ್ನೂ ಮಂಜೂರಾಗಿಲ್ಲ. 2,500 ರೂಪಾಯಿಗಳ ಅಂದಾಜು ಮಂಜೂರಾಗಿದೆ.

ಶ್ರೀ ವಿ. ವೆಂಕಟಪ್ಪ.—ಹಾಗಾದರೆ ರಸ್ತೆ ಕೆಲಸ ಪ್ರಾರಂಭವಾಗಿದೆಯೇ?

ಶ್ರೀ ಟಿ. ಚನ್ನಯ್ಯ.—ನಮಗೆ ಬಂದಿರುವ ವರ್ತಮಾನದ ಪ್ರಕಾರ ಪ್ರಾರಂಭವಾಗಿದೆ.

ಶ್ರೀ ವಿ. ವೆಂಕಟಪ್ಪ.—ಆ ರಸ್ತೆ ಕೆಲಸವೇನೂ ಆಗಿಯೇ ಇಲ್ಲವೆಂದರೆ ಅದನ್ನು ತಾವು ಒಪ್ಪುತ್ತೀರಾ?

Sri T. CHANNIAH.—I will examine it.

ಶ್ರೀ ವಿ. ವೆಂಕಟಪ್ಪ.—ಹಾಗೆ ರಸ್ತೆ ಕೆಲಸ ಪ್ರಾರಂಭವಾಗಿದ್ದರೆ ತಾವು stay ಮಾಡಿರುವುದು ಏನನ್ನು ಅನ್ನುವುದು ನನಗೆ ಅರ್ಥವಾಗುತ್ತಿಲ್ಲವಲ್ಲ?

ಶ್ರೀ ಟಿ. ಚನ್ನಯ್ಯ.—Execution of further work of the road has been stayed.

Sri V. VENKATAPPA.—What is the work stopped, when the work has not at all been taken up?

ಶ್ರೀ ಟಿ. ಚನ್ನಯ್ಯ.—ಆ ರಸ್ತೆಯ ಕೆಲಸವನ್ನು ಮುಂದುವರಿಸದಂತೆ ತಡೆ ಮಾಡಲಾಗಿದೆ.

ಶ್ರೀ ವಿ. ವೆಂಕಟಪ್ಪ.—ಜಮೀನ್ ಅಕ್ವಯರ್ ಮಾಡಿಕೊಂಡಿಗತಕ್ಕವರಲ್ಲಿ ಬಾಕಿ ಯಾರಾದರೂ ಹೀಗೆ ತಕರಾರು ಹಾಕಿದ್ದಾರೆಯೇ?

ಶ್ರೀ ಟಿ. ಚನ್ನಯ್ಯ—ಇಲ್ಲ.

ಶ್ರೀ ವಿ. ವೆಂಕಟಪ್ಪ.—ಎಷ್ಟು ಜನಗಳ ಜಮೀನು ಈಗ ಅಕ್ವಯರ್ ಆಗಿದೆ?

ಶ್ರೀ ಟಿ. ಚನ್ನಯ್ಯ.—7 ಜನಗಳ ಜಮೀನು.

ಶ್ರೀ ವಿ. ವೆಂಕಟಪ್ಪ.—ಈ ರಸ್ತೆ ಆಗಬೇಕಾದದ್ದು ಎಷ್ಟು ಫರ್ಲಾಂಗುಗಳು ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ವಿ. ವೆಂಕಟಪ್ಪ.—ಈ ರಸ್ತೆ ಆಗಬೇಕಾದದ್ದು ಕೇವಲ 6 ಫರ್ಲಾಂಗ್ ಮಾತ್ರವಿದ್ದು, ಈ ರಸ್ತೆ ಇಲ್ಲದೆ ಅನೇಕ ಜನರಿಗೆ ತುಂಬ ತೊಂದರೆಯಾಗಿರುವುದರಿಂದ ಹಿಂದೆ ಸಚಿವರಾಗಿದ್ದ ಶ್ರೀಮಾ ಎಲ್. ಸಿದ್ದಪ್ಪನವರು ಅಲ್ಲಿಗೆ ಖುದ್ದಾಗಿ ಬಂದು ಈ ರಸ್ತೆ ಬಹಳ ಅಗತ್ಯ ವೆಂದು ಅವರೇ ಮಂಜೂರು ಮಾಡಿದ್ದು ನಿಜವೇ ?

ಶ್ರೀ ಟಿ. ಚನ್ನಯ್ಯ.—ಆ ವಿಚಾರ ನನಗೆ ಗೊತ್ತಿಲ್ಲ.

ಶ್ರೀ ವಿ. ವೆಂಕಟಪ್ಪ.—ಈ ಕೆಲಸ 1946ರಲ್ಲೇ ಮಂಜೂರಾಯಿತಲ್ಲವೇ ?

ಶ್ರೀ ಟಿ. ಚನ್ನಯ್ಯ.—ಹೌದು.

ಶ್ರೀ ವಿ. ವೆಂಕಟಪ್ಪ.—ಹಾಗಾದರೆ 1946 ರಿಂದ 1953 ರ ತನಕ ಈ 6 ಫರ್ಲಾಂಗ್ ಕೆಲಸವನ್ನು ಕೂಡ ಮಾಡಿಸಲು ಸರ್ಕಾರಕ್ಕೆ ಸಾಧ್ಯವಾಗಿಲ್ಲವೆಂಬುದು ತಮಗೆ ವೇದ್ಯವಾಗುತ್ತಿದೆಯೇ ?

Sri T. CHANNIAH.—It is obvious. The work will be expedited.

ಶ್ರೀ ವಿ. ವೆಂಕಟಪ್ಪ.—ಈ ರಸ್ತೆಯ ಕೆಲಸಕ್ಕೆ ತಡೆ ಆಗಿರುವುದರಿಂದ ಜನರಿಗೆ ಬಹಳ ತೊಂದರೆಯಾಗಿದೆ ಯೆಂದು ಪಂಚಾಯಿತಿಯವರು ತಮಗೆ ಅರ್ಜಿ ಬರೆದು ಕೊಂಡಿದ್ದಾರೆಯೇ ?

ಶ್ರೀ ಟಿ. ಚನ್ನಯ್ಯ.—ಆ ರೀತಿ ಯಾವ ಅರ್ಜಿಯೂ ಬಂದಿಲ್ಲ. ರೆಕಾರ್ಡುಗಳನ್ನು ಬೇಗ ತರಿಸಿ ಇತ್ಯರ್ಥ ಮಾಡುತ್ತೇವೆ.

ಶ್ರೀ ವಿ. ವೆಂಕಟಪ್ಪ.—ಅಲ್ಲಿ ಈಗ ಈ ರಸ್ತೆ ಆಗದೇ ಯಿರುವುದರಿಂದ ರೈತರು ತಮ್ಮ ಜಮೀನುಗಳಿಗೆ ಉಳುಮೆ ಸಹ ಮಾಡಲು ಹೋಗುವುದಕ್ಕೆ ಅವಕಾಶ ವಿಲ್ಲದಂತಾಗಿ ಜನರಿಗೆ ಬಹಳ ತೊಂದರೆಯಾಗಿರುತ್ತ ದೆಂಬ ಅಂಶ ಈಗಿರ ತಕ್ಕ ಮಾನ್ಯ ರೆವಿನ್ಯೂಮಿನವರವರ ಗಮನಕ್ಕೂ ಬಂದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿದೆ. ನೋಡಿ ದ್ದೇನೆ.

ಶ್ರೀ ವಿ. ವೆಂಕಟಪ್ಪ.—ಆದ್ದರಿಂದ ತೊಂದರೆಯಾಗಿಲ್ಲ ಎಂಬ ಅಭಿಪ್ರಾಯ ಏದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಸ್ವಲ್ಪ ತೊಂದರೆ ಯಾಗಿದೆಯೆಂದು ಗೊತ್ತಾಗಿದೆ. ರಿಕಾರ್ಡು ತರಿಸಿ ಜಾಗ್ರತೆ ಪರಿಹಾರ ಮಾಡುತ್ತೇವೆ.

ಶ್ರೀ ಕೆ. ಪುಟ್ಟಸ್ವಾಮಿ.—18-8-1952ರಲ್ಲಿ ಸ್ಟೇ ಆರ್ಡರು ಕೊಟ್ಟಿದೆಯಲ್ಲಾ. ಅದಕ್ಕೆ ತಮಗೆ ಎಲ್ಲಿ ಅಧಿಕಾರವಿದೆ ?

ಶ್ರೀ ಟಿ. ಚನ್ನಯ್ಯ.—ಸರ್ಕಾರದ ಯಾವುದೇ ಆರ್ಡ್ ನಿಂದ ತೊಂದರೆಯಾಗಿದೆಯೆಂದು ತಿಳಿದು ಬಂದರೂ ಅಂತಹ ತೊಂದರೆಗಳಿಗೆ ತಕ್ಕ ಪರಿಹಾರ ಒದಗಿಸಲು ಮತ್ತು ಹಿಂದಿನ ಆರ್ಡರನ್ನು ಮಾರ್ಪಡಿಸಲು ಸರ್ಕಾ ರಕ್ಕೆ ಅಧಿಕಾರವಿದ್ದೇ ಇದೆ.

Sri K. PUTTASWAMY.—Is it not a fact that under the Land Acquisition Act Government was *functus officio* on 22nd June 1949 ?

Sri T. CHANNIAH.—It is a question of law, Sir.

Sri K. PUTTASWAMY.—When the Government had no power when the property was handed over to the possession of the Chirman, I want to know under what authority the Government passed a stay order ?

Sri Kadidal MANJAPPA.—The authorities are divided on that point. Some High Courts have held that Government have no power and some express the contrary view.

Sri K. PUTTASWAMY.—What is the decision of our own High Court ?

Sri Kadidal MANJAPPA.—Notice please.

Sri K. PUTTASWAMY.—What was the special reason for passing this order even when the Government was *functus officio* ?

Sri Kadidal MANJAPPA.—I have not conceded that position, Sir.

Sri K. PUTTASWAMY.—Is it the opinion of the Government that when the order was passed on 22nd June 1949 the points raised in the present petition that is pending before the Government was not considered at the time ?

Sri Kadidal MANJAPPA.—Might not be.

Sri K. PUTTASWAMY.—I want to know whether this point was considered by the Government at the time when the order was passed in 1949 ?

Sri Kadidal MANJAPPA.—Government may not have considered at that time, all these things that are raised in the petition now.

Sri K. PUTTASWAMY.—My question is, certain point has been raised on which the Government has been pleased to pass a stay order. I want to know whether that point was considered at that time or whether it is a fresh point?

Sri Kadidal MANJAPPA.—That is an additional point raised subsequently.

Sri K. PUTTASWAMY.—May I know what is the additional point raised ?

Sri Kadidal MANJAPPA.—I must refer to the application. It is not readily available.

ಶ್ರೀ ವಿ. ಆರ್. ನಾಯ್ಡು.—ಸಿದ್ಧಯ್ಯನವರು ಅರ್ಜಿ ಕೊಟ್ಟರು, ಸ್ಟೇ ಆರ್ಡರು ಕೊಟ್ಟಿದೆ' ಎಂದು ಹೇಳು ತ್ತಾರೆ. ಅವರ ಜೊತೆಯಲ್ಲಿ ಯಾರಾದರೂ ಬಂದಿದ್ದರೆ!

Mr. SPEAKER.—You need not answer that question.